168(383) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವ ಕಲ್ಯಾಣ

ವಿಷಯ: ಅಂಬೇಡ್ಕರ್ ಮತ್ತು ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಕೈಗೊಂಡಿರುವ ಕಾಮಗಾರಿಗಳು:

ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಳೆದ 2 ವರ್ಷಗಳ ಅವಧಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದಿಂದ ತೆಗೆದುಕೊಳ್ಳಲಾದ ಅಭಿವೃದ್ಧಿ ಕಾಮಗಾರಿಗಳ ವಿವರಗಳೇನು(ವಿಧಾನ ಸಭಾ ಕ್ಷೇತ್ರವಾರು ಅಂಕಿ ಅಂಶಗಳನ್ನು ಒದಗಿಸವುದು)

ಆ) ಈ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ?

ಇ) ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ಮೇಲ್ಕಂಡ ನಿಗಮಗಳಿಂದ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಇದಕ್ಕಾಗಿ ವೆಚ್ಚ ಮಾಡಲಾದ ಹಣವೆಷ್ಟು (ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)

ಈ) ಈ ಪೈಕಿ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಹಾಗೂ ವೆಚ್ಚ ಮಾಡಿರುವ ಹಣವೆಷ್ಟು?

ಉ) ಉತ್ತಮ ಗುಣಮಟ್ಟದ ಪಂಪ್‌ಸೆಟ್‌ಸಾಮಗ್ರಿಗಳನ್ನು ಸರಬರಾಜು ಮಾಡಲು ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಇಕ್ಬಾಲ್ ಅನ್ಸಾರಿ

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಎರಡು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು

ಹಮ್ಮಿಕೊಳ್ಳಲಾಗಿದೆ. ವಿಧಾನ ಸಭಾ ಕ್ಷೇತ್ರವಾರು ವರದಿಯನ್ನು ಅನುಬಂಧ ಅ ರಲ್ಲಿ ಲಗತ್ತಿಸಿದೆ.

ಕಳೆದ 2 ವರ್ಷಗಳ ಅವಧಿಯಲ್ಲಿ ಡಾ: ಬಿ.ಆರ್. ಅಂಬೇಡ್ಕರ4 ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿ ವಿಧಾನಸಭಾ ಕ್ಷೇತ್ರವಾರು ಕೊರೆದ ಕೊಳವೆ ಬಾವಿಗಳ ವಿವರ ಈ ಕೆಳಕಂಡಂತಿದೆ.

1.	ವಿಧಾನಸಭಾ ಕ್ಷೇತ್ರ	ಕೊರೆದ ಕೊ.ಬಾವಿಗಳ ಸಂಖ್ಯೆ	ಕೊರೆದ ಕೊ.ಬಾವಿಗಳ ಸಂಖ್ಯೆ	ಒಟ್ಟು
1.	ಔರಾದ	88	58	146
2.	ಭಾಲ್ಕಿ	62	66	128
3.	ಹುಲಸೂರು	41	51	103
4.	ಹುಮನಾಬಾದ	80	119	199
5.	ಬೀದರ್	52	3	55
6.	ಬಸವಕಲ್ಯಾಣ	73	7	80
	ಒಟ್ಟು	**396**	**315**	**711**

ಆ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ಕಾರ್ಯಗತ ಗೊಳಿಸಲಾಗುತ್ತಿರುವ ಕಾರ್ಯಕ್ರಮಗಳ ಅಂದರೆ ಸ್ವಾವಲಂಭನೆ ಸಾಲದ ಯೋಜನೆ ಅರಿವು (ವಿದ್ಯಾಭ್ಯಾಸ ಸಾಲ) ಯೋಜನೆ ಶ್ರಮಶಕ್ತಿ ಸಾಲದ ಯೋಜನೆ ಗಂಗಾ ಕಲ್ಯಾಣ ಯೋಜನೆ ಮತ್ತು ಭೂ ಖರೀದಿ ಯೋಜನೆ ಸಾಲದ ಯೋಜನೆಯಡಿಯಲ್ಲಿ ಸಾಲ ಬಿಡುಗಡೆ ಮಾಡಲಾಗುತ್ತಿದೆ. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಯಿಸಿ ಪಂಪ್ ಸೆಟ್ ಅಳವಡಿಸಲಾಗಿದೆ. ವಿದ್ಯುದೀಕರಣ ಬಾಕಿ ಇದೆ.

ಒಟ್ಟು ಕೊರೆದ 711 ಕೊಳವೆ ಬಾವಿಗಳ ಪೈಕಿ 396 ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಅಳವಡಿಸಲಾಗಿದೆ. ಉಳಿಕೆ 315 ಕೊಳವೆ ಬಾವಿಗಳಿಗೆ ದಿನಾಂಕ 21.05.2007 ರಂದು ಪಂಪ್‌ಸೆಟ್‌ಗಳನ್ನು

ಸರಬರಾಜು ಮಾಡಲು ಕಾರ್ಯಾದೇಶ ನೀಡಿದ್ದು, ಅದರಂತೆ ಕಾರ್ಯ ಪ್ರಗತಿಯಲ್ಲಿದೆ. ಈ ಎಲ್ಲಾ ಕೊಳವೆಬಾವಿಗಳಿಗೆವಿದ್ಯುತ್ ಸಂಪರ್ಕ ಕಲ್ಪಿಸಲು ಎಲ್ಲಾ ವಿದ್ಯುತ್ ಸರಬರಾಜು ಕಂಪೆನಿಗಳಿಗೆ ವೈ.ಎಂ.ಡಿ/ಎಂಎಸ್.ಡಿ ಹಣ ಪಾವತಿಸಲು ಈಗಾಗಲೇ ಎಲ್ಲಾ ಜಿಲ್ಲಾ ವ್ಯವಸ್ಥಾಪಕರುಗಳಿಗೆ ಹಣ ಬಿಡುಗಡೆ ಮಾಡಲಾಗಿದ್ದು ಅದರಂತೆ ವಿದ್ಯುದೀಕರಣ ಕಾರ್ಯ ಪ್ರಗತಿಯಲ್ಲಿದೆ.

ಇ) ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧೀ ನಿಗಮದಿಂದ ಪ್ರಸಕ್ತ ಸಾಲಿನಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಇದಕ್ಕೆ ನಿಗದಿಪಡಿಸಿದ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಅನುಬಂಧ ಆ ರಲ್ಲಿ ನೀಡಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ಕೊಳವೆಬಾವಿ ಕೊರೆಯುವ ಕಾರ್ಯವನ್ನು ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಕೈಗೆತ್ತಿಕೊಳ್ಳಲಾಗುವುದು. ವಿಧಾನಸಭಾ ಕ್ಷೇತ್ರವಾರು ನಿಗದಿಪಡಿಸಿದ ಆರ್ಥಿಕ ಹಾಗೂ ಭೌತಿಕ ಗುರಿ ಈ ಕೆಳಕಂಡಂತಿದೆ.

ಕ್ರ.ಸಂ.	ವಿಧಾನಸಭಾ ಕ್ಷೇತ್ರದ ಹೆಸರು	ಭೌತಿಕಗುರಿ ಆಯವ್ಯದಲ್ಲಿ ನಿಗದಿಪಡಿಸಿದ ಗುರಿ	ಡಾ:ನಂಜುಂಡಪ್ಪ ವರದಿಯ ಆಧಾರಧ ಮೇಲೆ ನಿಗದಿಪಡಿಸಿದ ಹೆಚ್ಚುವರಿ ಗುರಿ	ಆರ್ಥಿಕ ಗುರಿ (ರೂ ಲಕ್ಷಗಳಲ್ಲಿ
1.	ಔರಾದ	37	30	57.62
2.	ಭಾಲ್ಕಿ	28	30	57.62
3.	ಹುಲಸೂರು	22	–	18.92
4.	ಹುಮನಾಬಾದ್	28	30	49.88
5.	ಬೀದರ್	15	–	12.90
6.	ಬಸವಕಲ್ಯಾಣ	28	30	49.88
	ಒಟ್ಟು	158	120	239.08

ಈ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ

ಒದಗಿಸಲಾಗುತ್ತರುವ ಯೋಜನೆಗಳಿಗೆ ಅಭ್ಯರ್ಥಿಗಳನ್ನು ಅರ್ಜಿಯನ್ನು ಅಹ್ವಾನಿಸಲಾಗಿದೆ. ಹಾಗೂ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ.

ಸರ್ಕಾರದಿಂದ ದಿನಾಂಕ 04.7.2007 ರಂದು ರೂ. 935 ಲಕ್ಷಗಳು ನಿಗಮಕ್ಕೆ ಬಿಡುಗಡೆಯಾಗಿರುತ್ತದೆ. 2007–08 ರ ಸಾಲಿನಲ್ಲಿ ಕೊಳವೆ ಬಾವಿಗಳನ್ನು ಕೊರೆಯಲು ಟೆಂಡರ್ ಪ್ರಕ್ರಿಯೆ ಪೂರ್ವ ಸಿದ್ದತೆಯಲ್ಲಿದ್ದು ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಕೊಳವೆ ಬಾವಿಗಳ ಕೊರೆಯುವ ಕಾರ್ಯ ಪ್ರಾರಂಭಿಸುಲಾಗುವುದು.

ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು
ವಿಧಾನ ಸಭೆಯ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)ರವರ ಚಿಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 383 ರ ಅ ಪ್ರಶ್ನೆಯ ಉತ್ತರಕ್ಕೆ ಅನುಬಂಧ.
2005–06

ಕ್ರ. ಸಂ.	ಯೋಜನೆಗಳ ವಿವರ	ಬೀದರ್	ಹುಮನಾಬಾದ್	ಬಸವಕಲ್ಯಾಣ	ಭಾಲ್ಕಿ	ಔರಾದ	ಹುಲಸೂರು	ಒಟ್ಟು
1.	ಸ್ವಾವಲಂಭನ ಸಾಫ್ಟ್‌ಲೋನ್	73 5.28	18 1.01	13 0.65	6 0.46	22 1.91	6 0.30	138 9.61
2.	ಅರಿವು (ವಿದ್ಯಾಬ್ಯಾಸ ಸಾಲ)	26 4.25	6 0.80	1 0.20	4. 0.50	0 0	0 0	37 5.75
3.	ಗಂಗಾ ಕಲ್ಯಾಣ ಯೋಜನೆ	16 1.04	18 14.16	6 5.13	4 2.60	5 4.8	4 2.60	53 39.01
4.	ಶ್ರಮಶಕ್ತಿ ಯೋಜನೆ	4 0.75	5 1.25	3 0.60	5 0.65	4 0.65	3 0.50	24. 4.40
5.	ಭೂ ಖರೀದಿ ಯೋಜನೆ	–	–	–	–	–	–	– –
	ಒಟ್ಟು	**119 20.32**	**47 17.22**	**23 6.58**	**19 4.21**	**31 7.04**	**13 3.4**	**252 58.77**

2006–07

ಕ್ರ. ಸಂ.	ಯೋಜನೆಗಳ ವಿವರ	ಬೀದರ್		ಹುಮನಾಬಾದ್		ಬಸವಕಲ್ಯಾಣ		ಭಾಲ್ಕಿ		ಔರಾದ		ಹುಲಸೂರು		ಒಟ್ಟು	
1.	ಸ್ವಾವಲಂಭನ ಸಾಫ್ಟ್‌ಲೋನ್	196	18.93	145	10.62	78	4.67	32	4.19	37	5.1	6	0.46	494	43.97
2.	ಅರಿವು (ವಿದ್ಯಾಬ್ಯಾಸ ಸಾಲ)	203	30.15	24	2.6	6	1.3	6	1.05	5	0.6	2	0.4	246	36.1
3.	ಗಂಗಾ ಕಲ್ಯಾಣ ಯೋಜನೆ	21	6.83	39	12.65	17	5.51	16	5.19	14	4.53	14	4.54	121	39.25
4.	ಶ್ರಮಶಕ್ತಿ ಯೋಜನೆ	19	3.66	32	5.16	20	5.19	8	1.36	14	2.54	7	1.38	100	19.29
5.	ಭೂ ಖರೀದಿ ಯೋಜನೆ	–		–		–		–		–		–		–	–
	ಒಟ್ಟು	**439**	**59.57**	**240**	**31.03**	**121**	**16.27**	**62**	**11.79**	**70**	**12.77**	**29**	**6.78**	**961**	**138.61**

ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು
ವಿಧಾನ ಸಭೆಯ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)ರವರ ಚಿಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ
383 ರ ಇ ಪ್ರಶ್ನೆಯ ಉತ್ತರಕ್ಕೆ ಅನುಬಂಧ
2005–06

ಕ್ರ. ಸಂ.	ಯೋಜನೆಗಳ ವಿವರ	ಬೀದರ್		ಹುಮನಾಬಾದ್		ಬಸವಕಲ್ಯಾಣ		ಭಾಲ್ಕಿ		ಔರಾದ		ಹುಲಸೂರು		ಒಟ್ಟು	
1.	ಸ್ವಾವಲಂಭನ ಸಾಫ್ಟ್‌ಲೋನ್	74	92.50	74	92.50	74	92.5	74	92.5	74	92.5	74	92.5	444	555
2.	ಅರಿವು (ವಿದ್ಯಾಬ್ಯಾಸ ಸಾಲ)	37	6.48	37	6.48	37	6.48	37	6.48	37	6.48	37	6.48	222	38.88
3.	ಗಂಗಾ ಕಲ್ಯಾಣ ಯೋಜನೆ	17	17.00	17	17.00	17	17.00	17	17.00	16	16.00	16	16.00	100	100
4.	ಶ್ರಮಶಕ್ತಿ ಯೋಜನೆ	19	4.75	19	4.75	19	4.75	19	4.75	19	4.75	19	4.75	114	28.5
5.	ಭೂ ಖರೀದಿ ಯೋಜನೆ	–		–		–		–		–		–		–	–
	ಒಟ್ಟು	**147**	**120.76**	**147**	**120.73**	**147**	**120.73**	**147**	**120.73**	**146**	**119.73**	**146.**	**119.76**	**880**	**722.38**

ಡಿ. ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಫಲಾನುಭವಿಗಳಿಂದ ಇದುವರೆವಿಗೂ ಯಾವುದೇ ದೂರುಗಳು ಬಂದಿರುವುದಿಲ್ಲ. ಪಂಪು ಮೋಟಾರು ಹಾಗೂ ಸಾಮಗ್ರಿಗಳ ಸರಬರಾಜಿಗೆ ಟೆಂಡರ್ ಆಹ್ವಾನಿಸಿ, ದರಗಳನ್ನು ಉನ್ನತ ಮಟ್ಟದ ಸಮಿತಿ ಪರಿಶೀಲಿಸಿದ ನಂತರ ಅನುಮೋದಿಸಲಾಗುತ್ತಿದೆ. ಟೆಂಡರ್‌ಗಳಲ್ಲಿ ಭಾಗವಹಿಸಲು ಪಂಪ್‌ಸೆಟ್ ಸರಬರಾಜುದಾರರ ಕಂಪೆನಿಗಳು ಈ ಮುಂದಿನ ಅರ್ಹತೆಗಳನ್ನು ಹೊಂದಿರಬೇಕು.

1. ಪಂಪು ತಯಾರಿಕಾ ಕಂಪೆನಿಗಳು ISO 9001–2000 QMS certificate ISI/BIS ಹೊಂದಿರುವ ಸಬ್ ಮರ್ಸಿಬಲ್ ಪಂಪ್‌ಸೆಟ್ ಉತ್ಪಾದನೆ ಮಾಡುವ ಘಟಕಗಳನ್ನು ಹೊಂದಿರಬೇಕು.

2) ಶೇಕಡಾ 45 ರಷ್ಟು ಸಾಮರ್ಥ್ಯ ಹೊಂದಿರುವ ಪಂಪ್‌ಸೆಟ್‌ಗಳನ್ನು ಸರಬರಾಜು ಮಾಡಬೇಕು.

3) ಟೆಂಡರ್‌ನಲ್ಲಿ ನಿಗದಿಪಡಿಸಿದ ವಿಶಿಷ್ಠತೆಗೆ Specification ಅನುಸಾರ ಪೂರಕ ಸಾಮಗ್ರಿಗಳನ್ನು ಸರಬರಾಜು ಮಾಡಬೇಕು.

4) ಕಂಪೆನಿಗಳ ಹಣಕಾಸು ವಹಿವಾಟು ಕನಿಷ್ಠ 100 ಲಕ್ಷ ರೂ ಗಳಾಗಿರಬೇಕು (State SSI U&nits) ಹಾಗೂ ಇತರರು ಕನಿಷ್ಟ 200 ಲಕ್ಷ ರೂಗಳ ವಹಿವಾಟು ಹೊಂದಿರಬೇಕು.

5) ಸರಬರಾಜು ಮಡುವ ಪಂಪು ಮೋಟಾರು ಹಾಗೂ ಸಾಮಗ್ರಿಗಳ ಗುಣಮಟ್ಟ ತಪಾಸಣೆಯನ್ನು 3 ನೇ ತನಿಖಾ ಸಂಸ್ಥೆಯಿಂದ ಧೃಢೀಕರಣ ಪ್ರಮಾಣ ಪತ್ರ ನೀಡಿದ ನಂತರವೇ ಫಲಾನುಭವಿಗಳಿಗೆ ಸರಬರಾಜು ಮಾಡಲಾಗುತ್ತಿದೆ.

6) ಫಲಾನುಭವಿಗಳಿಗೆ ಸರಬರಾಜು ಮಾಡಿದ ಪಂಪು ಮೋಟಾರು ಹಾಗೂ ಸಾಮಗ್ರಿಗಳು ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕಗೊಂಡ ದಿನಾಂಕದಿಂದ ಎರಡು ವರ್ಷಗಳ ಗ್ಯಾರೆಂಟಿ ಅವಧಿ ಹೊಂದಿರುತ್ತದೆ.

ಈ ಅವಧಿಯಲ್ಲಿ ಯಾವುದೇ ದೋಷ ಉಂಟಾದಲ್ಲಿ ಇದನ್ನು ಸರಿಪಡಿಸಿ ಅಥವಾ ಅಗತ್ಯ ಬಿದ್ದಲ್ಲಿ ಬದಲಾಯಿಸಿಕೊಡುವುದು ಸರಬರಾಜುದಾರರ ಜವಾಬ್ದಾರಿಯಾಗಿರುತ್ತದೆ.

ಈ ರೀತಿಯಲ್ಲಿ ಉತ್ತಮ ಗುಣಮಟ್ಟದ ಪಂಪ್‌ಸೆಟ್ ಮತ್ತು ಇತರ ಸಾಮಗ್ರಿಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ.

169(235) ಶ್ರೀ ನರಸಿಂಹಸ್ವಾಮಿ ಜೆ(ದೊಡ್ಡಬಳ್ಳಾಪುರ)

ವಿಷಯ: ಕೊಳವೆ ಬಾವಿಗಳ ಪಂಪ್‌ಸೆಟ್ ಸಾಮಗ್ರಿಗಳ ಸರಬರಾಜು

ಮಾನ್ಯ ಕಾರ್ಮಿಕ ಕಲ್ಯಾಣ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಅಲ್ಪಸಂಖ್ಯಾತರ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಕೆಯಿಮದ ಮಂಜೂರು ಮಾಡುವ ಕೊಳವೆ ಬಾವಿಗಳಿಗೆ ಸಂಭಂದಿಸದಂತೆ ಪಂಪ್ ಸೆಟ್ಟು ಸಾಮಗ್ರಿಗಳನ್ನು ಕೊಳ್ಳಲು ಸರ್ಕಾರ ಫಲಾನುಭವಿಗಳಿಗೆ ನೇರವಾಗಿ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವುದೇ?

ಆ) ಇತ್ತೀಚೆಗೆ ಇಲಾಖೆಯಿಂದ ಟೆಂಡರ್ ಮೂಲಕ ಒದಗಿಸಿರುವ ಪಂಪುಸೆಟ್ಟುಗಳ ಗುಣಮಟ್ಟ ಸರಿಯಿಲ್ಲದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಸರ್ಕಾರದ ಮುಮದಿನ ನಿಲುವೇನು?

ಶ್ರೀ ಇಕ್ಬಾಲ್ ಅನಸಾರಿ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಹಾಗೂ ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ